**ದಿಃ05-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್ ಬಿ ಪಿ 4 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಮತ್ತು 2 ನೇ ವಾದಿ ಸೇರಿ ಹಳ್ಳಿಕಟ್ಟೆ ಬಾಬಣ್ಣರವರ ವಿರುದ್ಧ ದಾಖಲಿಸಿದ್ದೇನೆ. ಹಳ್ಳಿಕಟ್ಟೆ ಬಾಬಣ್ಣ ಎಂದರೆ 4 ನೇ ಪ್ರತಿವಾದಿ. 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ನಾವು ಪ್ರಕರಣ ದಾಖಲಿಸಿಲ್ಲ. 1 ರಿಂದ 3 ನೇ ಪ್ರತಿವಾದಿಗಳು ನನ್ನಿಂದ ಪ್ರಸ್ತುತ ಪ್ರಕರಣ ದಾಖಲಿಸಿದ್ದಾರೆಂದರೆ ಸರಿ. ದಾವ ಆಸ್ತಿ ನಮ್ಮದು ಮತ್ತು ಅದರ ಪಹಣಿ ಪತ್ರಿಕೆಯಲ್ಲಿ 4 ನೇ ಪ್ರತಿವಾದಿಯ ಹೆಸರು ಬರುವಂತೆ ಮಾಡಿಕೊಂಡಿದ್ದು ಆ ಕಾರಣ ಪ್ರಕರಣ ದಾಖಲಿಸಿರುವೆನು. 2 ಮತ್ತು 3 ನೇ ಪ್ರತಿವಾದಿಗಳು ನನ್ನ ತಮ್ಮಂದಿರರು. 1 ನೇ ಪ್ರತಿವಾದಿಯ ಗಂಡ ರಂಗಾನಾಯ್ಕರವರಿಗೆ ಬಾಬಾ ನಾಯ್ಕ ಅಂತಲೂ ಸಹ ಕರೆಯುತ್ತಿದ್ದರು ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳ ವಿವರ ಗೊತ್ತಾಗುವುದಿಲ್ಲ. ದಾವ ಆಸ್ತಿಯ ಸ.ನಂ., ಕ್ಷೇತ್ರ ಮತ್ತು ವಿಸ್ತೀರ್ಣ ಗೊತ್ತಿಲ್ಲ.

ದಾವ ಆಸ್ತಿ ಹೊರತುಪಡಿಸಿ ನಮಗೆ ಬೇರೆ 1 ಎಕರೆ 20 ಗುಂಟೆ ಆಸ್ತಿ ಇದೆ. ಸದರಿ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ. ನಾನು, 2 ಮತ್ತು 3 ನೇ ಪ್ರತಿವಾದಿಗಳು ಬೇರೆ ಬೇರೆ ಮನೆಗಳಲ್ಲಿ ವಾಸ ಇದ್ದೇವೆಂದರೆ ಸರಿ. ನಾವು ಹೊಂದಿದ್ದ ಬೇರೆ 1 ಎಕರೆ 20 ಗುಂಟೆ ಆಸ್ತಿ ಮತ್ತು ನಾನು, 2 ಮತ್ತು 3 ನೇ ಪ್ರತಿವಾದಿಗಳು ವಾಸ ಇದ್ದ ಮನೆ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವ ಆಸ್ತಿ ಹೊರತುಪಡಿಸಿ ಒಟ್ಟು 4 ಕೆಂಪು ಹೆಂಚಿನ ಮನೆಗಳು ಇದ್ದು ಅವುಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ. ನನ್ನ ವಿವಾಹವಾದ ನಂತರ ನಾನು ಪ್ರತ್ಯೇಕವಾಗಿ ವಾಸ ಇದ್ದೇನೆ. ದಾವ ಆಸ್ತಿ ಹೊರತುಪಡಿಸಿ ಬೇರೆ 1 ಎಕರೆ 20 ಗುಂಟೆ ಆಸ್ತಿಯನ್ನು ನಾನು ಮತ್ತು 2 ನೇ ವಾದಿ ಸೇರಿ ಸಾಗುವಳಿ ಮಾಡುತ್ತಿದ್ದೇವೆ.

4 ನೇ ಪ್ರತಿವಾದಿ ನಮ್ಮ ಕುಟುಂಬದ ಸದಸ್ಯ ಅಲ್ಲ. 4 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಪತ್ರಿಕೆ ಬರುತ್ತಿದ್ದ ಕಾರಣ 4 ನೇ ಪ್ರತಿವಾದಿಯ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ. 4 ನೇ ಪ್ರತಿವಾದಿಯ ಹೆಸರಿಗೆ ಯಾವ ಸ.ನಂ. ಆಸ್ತಿ ಪಹಣಿ ಪತ್ರಿಕೆ ಬರುತ್ತಿದೆ ಎಂದು ಗೊತ್ತಿಲ್ಲ ಆದರೆ ಪಹಣಿ ಪತ್ರಿಕೆ ದಾಖಲೆ ಹಾಜರುಪಡಿಸಿದ್ದೇನೆ.

<u>**ಪಿಡಬ್ಲ್ಯೂ : 01**</u>

ದಾವ ಆಸ್ತಿಯು ನನ್ನ ತಾಯಿ 1 ನೇ ಪ್ರತಿವಾದಿ 1993 ರಲ್ಲಿ ಕ್ರಯಕ್ಕೆ ಪಡೆದ ಆಸ್ತಿ ಎಂದರೆ ಸರಿ. ಆ ಕಾರಣ ದಾವ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವ ಆಸ್ತಿಯನ್ನು ಕ್ರಯಕ್ಕೆ ಕೊಂಡ ಕಾರಣ ದಾವ ಆಸ್ತಿಯ ಪಹಣಿ ಪತ್ರಿಕೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿದೆ ಎಂದರೆ ಸರಿ. ದಾವ ಆಸ್ತಿಯನ್ನು 1 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಹೆಸರಿಗೆ ಆಧಾರ ಮಾಡಿಕೊಟ್ಟಿದ್ದರು ಎಂದರೆ ಸರಿ. ನಂತರ 1 ರಿಂದ 3 ನೇ ಪ್ರತಿವಾದಿಗಳು ದಾವ ಆಸ್ತಿಯನ್ನು 4 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಕರಾರು ಪತ್ರವನ್ನು 2012 ರಲ್ಲಿ ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಗಳಿಗೆ 2014 ರಲ್ಲಿ 4 ನೇ ಪ್ರತಿವಾದಿ ನೋಟೀಸ್ ಜಾರಿ ಮಾಡಿ ಕ್ರಯ ಪತ್ರ ಬರೆದುಕೊಡಬೇಕೆಂದು ಅಸಲು ದಾವೆ ನಂ. 272/2014 ಅಂತಾ ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ 2015 ರಲ್ಲಿ ತೀರ್ಮಾನವಾಗಿತ್ತು ಎಂದರೆ ಸರಿ. ಡಿಕ್ರಿ ಆದೇಶದನ್ವಯ 1 ರಿಂದ 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ಬರೆದುಕೊಡದೆ ಇದ್ದ ಕಾರಣ 4 ನೇ ಪ್ರತಿವಾದಿ ಚನ್ನಗಿರಿ ನ್ಯಾಯಾಲಯದಲ್ಲಿ ಇಪಿ ನಂ.17/2016 ಅಂತಾ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಮಲ್ಜಾರಿ ಪ್ರಕರಣದಲ್ಲಿ 4 ನೇಪ್ರತಿವಾದಿ ಚನ್ನಗಿರಿ ನ್ಯಾಯಾಲಯದಲ್ಲಿ ಉಳಿದ ಪ್ರತಿಫಲದ ಹಣ ರೂ.55,000/- ಹಣವನ್ನು ಜಮೆ ಮಾಡಿದ್ದು ಸದರಿ ಹಣವನ್ನು ನಾವು ಇಲ್ಲಿಯವರೆಗೆ ಬಿಡಿಸಿಕೊಂಡಿಲ್ಲ ಎಂದರೆ ಸರಿ. ನಂತರ ನ್ಯಾಯಾಲಯವೇ 4 ನೇ ಪ್ರತಿವಾದಿ ಹೆಸರಿಗೆ ದಾವ ಆಸ್ತಿಯ ಕುರಿತು ಕ್ರಯ ಪತ್ರ ಬರೆದುಕೊಟ್ಟಿತ್ತು ಎಂದರೆ ನನಗೆ ಗೊತ್ತಿಲ್ಲ.

ನಂತರ 1 ರಿಂದ 3 ನೇ ಪ್ರತಿವಾದಿಗಳು ಇದೇ ನ್ಯಾಯಾಲಯದಲ್ಲಿ ಆರ್ ಎ ನಂ.32/2018 ಅಂತಾ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಚನ್ನಗಿರಿ ನ್ಯಾಯಾಲಯದಲ್ಲಿ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಇಪಿ ನಂ.26/2018 ಅಂತಾ ಪ್ರಕರಣ ದಾಖಲಿಸಿದ್ದು ಅದು ಈಗಲೂ ವಿಚಾರಣೆಗೆ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಅಮಲ್ಜಾರಿ ಪ್ರಕರಣದಲ್ಲಿ ತಕರಾರುದಾರ ಎಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ತಕರಾರುದಾರ ಎಂದು ಅಮಲ್ಜಾರಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿರುವೆ ಎಂದರೆ ನನಗೆ ಗೊತ್ತಿಲ್ಲ.

ದಾವ ಆಸ್ತಿ ಹೊರತುಪಡಿಸಿ ನಮ್ಮ ಕುಟುಂಬದ ಇತರೆ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸದೆ ಇದ್ದ ಕಾರಣ ಪ್ರಸ್ತುತ ಪ್ರಕರಣ ಊರ್ಜಿತ ಅಲ್ಲ ಎಂದರೆ ಸಾಕ್ಷಿ ಉತ್ತರಿಸಿರುವುದ್ದಿ. ಅಸಲು ದಾವೆ ನಂ.272/2014, ಇಪಿ ನಂ.17/2014 ಮತ್ತು ಇಪಿ ನಂ.26/2018, ಆರ್ ಎ ನಂ.32/2018 ರ ಪ್ರಕರಣಗಳನ್ನು ವಾದ ಪತ್ರದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ದಾವ ಆಸ್ತಿ ಮೂಲತಃ ನಮಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ 4 ನೇ ಪ್ರತಿವಾದಿ ದಾವ ಆಸ್ತಿಯ ಕುರಿತು ಕ್ರಯ ಪತ್ರ ಮಾಡಿಸಿಕೊಂಡ ಕಾರಣ ನಾವು ಮತ್ತು 1 ರಿಂದ 3 ನೇ ಪ್ರತಿವಾದಿಗಳು ಸೇರಿ 4 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಪ್ರಸ್ತುತ ಸುಳ್ಳು ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.